ಹೋಗಬಹುದಾದ ಯಾವ ಸಂದರ್ಭಗಳನ್ನೂ ಅವಳು ಕೈ ಜಾರಗೊಡುವವಳಲ್ಲ. ಈಗಂತೂ ಒಡವೆ, ವಸ್ತ್ರ ಎಂದು ಇಷ್ಟ ಬಂದಿದ್ದನ್ನೆಲ್ಲಾ ತಂದು ಕೂಡಿಟ್ಟುಕೊಂಡಿದ್ದಾಳೆ. ಕರೆ ಬಂದಲ್ಲಿಗೆ ಹೋಗದಿದ್ದರೆ ಅವುಗಳನ್ನೆಲ್ಲಾ ಪ್ರದರ್ಶಿಸುವುದು ಯಾವಾಗ? ಎಲ್ಲಿ?

‘ಹೊಸಾದು ತಗೊಂಡ್ಯೇನೇ? ನೀನು ಬಿಡು…’ ಎಂದು ಯಾರಾದರೂ ಅಟ್ಟಕ್ಕೇರಿಸುವ ಮಾತಾಡಿದರೆ ಹಿಗ್ಗಿ ಹೀರೇಕಾಯಿ ಆಗುವ ಶೀಲಾ ಮುನ್ನೂರರವತ್ತೈದು ದಿನವೂ ಮುದಿ ಮಾವನನ್ನು ನೋಡಿಕೊಂಡು ಮನೆಯಲ್ಲಿ ಬಿದ್ದಿರು ಅಂದರೆ ಹೇಗೆ ಸೈಸಿಕೊಳ್ಳಬಲ್ಲಳು? ಭಾನುವಾರದಂಥ ರಜಾದಿನವಾದರೆ ಗಂಡನ ಸಾಂಗತ್ಯದಲ್ಲಿ ಅವನ ಅಪ್ಪನನ್ನು ಬಿಟ್ಟು ಹೋಗಬಹುದು. ಆದರೆ ಒಬ್ಬಂಟಿಯಾಗಿ ಹೋಗುವುದು ಅವಳಿಗೆ ಇಷ್ಟವಾಗುವುದಿಲ್ಲ. ಗಂಡನನ್ನು ಜೊತೆ ಮಾಡಿಕೊಂಡು, ಮಗನನ್ನು ಮಗ್ಗುಲಲ್ಲಿ ಕೂರಿಸಿಕೊಂಡು ಕಾರಿನಲ್ಲಿ ಹೋಗಿ ಇಳಿಯುವುದೆಂದರೆ ಅದರ ಘನತೆಯೇ ಬೇರೆ. ಅಲ್ಲದೆ ಅಪರೂಪಕ್ಕೆ ಪಂಚಭಕ್ಷ್ಯ ಪರಮಾನ್ನ ಉಣ್ಣುವ ಯೋಗವನ್ನು ಗಂಡನಿಗೆ ತಪ್ಪಿಸಬಾರದು ಎನ್ನುವ ಕಳಕಳಿ. ಅವನ ಕಡೆಯಿಂದಂತೂ ಸೌಹಾರ್ದದಿಂದ ಆಮಂತ್ರಿಸುವ ಯಾವ ಸಂಬಂಧಿಕರಿಲ್ಲ. ಕರೆದರೆ ಗೆಳೆಯರ ಬಳಗದವರು ಕರೆಯಬೇಕು, ಅಷ್ಟೇ. ಇವಳಿಗಾದರೆ ಹಾಗಲ್ಲ. ಹುಟ್ಟಾ ಬೆಂಗಳೂರಿಗರಾದ್ದರಿಂದ ಆ ಊರಿನಲ್ಲಿ ಬಹಳಷ್ಟು ಬಳಗದವರಿದ್ದಾರೆ. ಅದೂ ಒಂದು ಹೆಮ್ಮೆ ಶೀಲಾಳಿಗೆ. ಮಾವನ ಮಗಳು, ಚಿಕ್ಕಮ್ಮನ ಮಗ, ದೊಡ್ಡತ್ತೆಯ ವಾರಗಿತ್ತಿ ಎಂದು ಹೋದೆಡೆಯಲ್ಲಿ ಅವಳು ಯಾರ್ಯಾರನ್ನೋ ಪರಿಚಯಿಸಿದರೆ ನೆನಪಿಟ್ಟುಕೊಳ್ಳಲಾಗದಷ್ಟು ಗೋಜಲಾಗುತ್ತದೆ ಭಾರ್ಗವನಿಗೆ.

‘ಮಾರಾಯ್ತೀ, ಬೆಂಗಳೂರಿನ ತುಂಬಾ ನಿನ್ನ ಬಳಗಾನೇ ತುಂಬ್ಕೊಂಡಿದೆ. ಯಾವ ಏರಿಯಾಗೆ ಹೋದ್ರೂ ಕೊನೇಪಕ್ಷ ಹತ್ತು ಜನ ನೆಂಟರಿರ್ತಾರೆ ನಿಂಗೆ…’ ಕೀಟಲೆ ಮಾಡುತ್ತಿದ್ದ ಭಾರ್ಗವ.

‘ಹೂಂ ಮತ್ತೆ. ನಮ್ಮನೇಲೂ ಎಲ್ಲಾ ಸರಿಯಾಗಿದ್ದಿದ್ರೆ ವರ್ಷಕ್ಕೊಂದು ದಿನ ಗೌತಮನ ಹುಟ್ಟುಹಬ್ಬಕ್ಕೆ ಎಲ್ರನ್ನೂ ಕರೀಬಹುದಿತ್ತು. ಪಾರಾಯಣವೋ, ಸತ್ಯನಾರಾಯಣವೋ ಮಾಡಿಸ್ಬೋದಿತ್ತು. ತೀರಾ ದುಡ್ಡಿನ ಮುಖ ನೋಡ್ಬೇಕಾಗಿದ್ದು ಈಗೇನಿಲ್ಲ. ಆದ್ರೆ ನಿಮ್ಮಪ್ಪ ಕೊಕ್ಕೆ ಹಾಕಿಟ್ಟಿದಾರಲ್ಲ. ಯಾರಾದ್ರೂ ಮನೆಗೆ ಬರ್ತೀವಿ ಅಂದ್ರೆ ಎದೆ ಹೊಡ್ಕೊಳ್ಳುತ್ತೆ ನಂಗೆ…’

ಎಷ್ಟು ಕಳೆಕಳೆಯಾಗಿದ್ದ, ಲವಲವಿಕೆಯಿಂದಿದ್ದ ಮನೆ ಒಬ್ಬರ ಅಸಹಜ ವರ್ತನೆಯಿಂದ ಹೇಗೆ ಮಂಕಾಗಿ ಹೋಯ್ತು ಎಂದು ನೆನೆದರೆ ಭಾರ್ಗವನಿಗೆ ಖೇದವಾಗುತ್ತದೆ. ಶೀಲಾ ಅವಶ್ಯಕತೆಗಿಂತ ಹೆಚ್ಚು ಪ್ರತಿಕ್ರಿಯಿಸುತ್ತಾಳೇನೋ ಎನ್ನುವ ಭಾವನೆಯೂ

‘ಹಾಗೇನಲ್ಲ’ ಎಂದು ಪ್ರತಿಪಾದಿಸುತ್ತಾಳೆ ಶೀಲಾ. ಆತ್ಮೀಯರ ಮನೆಯಿಂದ ಹೇಳಿಕೆ ಬಂದಾಗ ಆ ಆಕರ್ಷಣೆಯಿಂದ, ಅಥವಾ ಅನಿವಾರ್ಯತೆಯಿಂದ ಮಾವನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದಳು ಶೀಲಾ. ಅಲ್ಲಿ ಒಗ್ಗೂಡಿದವರನ್ನು ಬೆರಗುಗಣ್ಣಿನಿಂದ ನೋಡುತ್ತಾ, ಅವರ್ಯಾರು? ಇವರ್ಯಾರು? ಎಂದು ತೋರುಬೆರಳಿನಿಂದ ನಿರ್ದೇಶಿಸುತ್ತಿದ್ದ ಮಾವನಿಗೆ ಇಲ್ಲದ ಸಹನೆ ಬರಿಸಿಕೊಂಡು ಉತ್ತರಿಸುತ್ತಿದ್ದಳು ಸತತವಾಗಿ. ಹಿರೀ ಮನುಷ್ಯರು ಎಂದು ಯಾರಾದರೂ ಮಾತಾಡಿಸಿಕೊಂಡು ಬಂದರೆ ಉಡದಂತೆ ಅವರನ್ನು ಹಿಡಿದುಕೊಂಡು ಬಿಡುತ್ತಿದ್ದ ಚಿದಾನಂದ. ಎಲ್ಲಿಯೋರು?, ಯಾವ ಉದ್ಯೋಗ? ಹೆಸರೇನು? ಉತ್ತರ ಕೇಳಿಸಿಕೊಳ್ಳದೆ ಮುಂದೆ ಯಾವ ಪ್ರಶ್ನೆ ಕೇಳಬೇಕೆಂಬುದನ್ನೇ ಗುರಿಯಾಗಿರಿಸಿಕೊಂಡಂತಹ ವಿಚಾರಣೆಗಳು. ಕೇಳಿದ್ದನ್ನೇ ಕೇಳುವ ವೈಖರಿ. ಇದನ್ನಾದರೂ ಸಹಿಸಿಕೊಳ್ಳಬಹುದಿತ್ತೇನೋ.

ಆದರೆ ಒಂದು ಸಮಾರಂಭದಲ್ಲಿ ನಿಜಕ್ಕೂ ನಗೆಪಾಟಲಾಗಬೇಕಾದ ಪ್ರಸಂಗ ಎದುರಾಗಿತ್ತು, ಶೀಲಾ ದೃಷ್ಟಿಯಲ್ಲಿ. ಅವಳು ಎಲ್ಲಿಗೆ ಹೋದರೂ ಮಾವನ ಮೇಲೆ ಒಂದು ಕಣ್ಣು ಇಟ್ಟೇ ಇರುತ್ತಿದ್ದಳು. ತನ್ನ ಪಕ್ಕದಲ್ಲೇ ಕೂರಿಸಿಕೊಳ್ಳುತ್ತಿದ್ದಳು. ಅವತ್ತು ಮೊದಲ ಪಂಕ್ತಿಯ ಊಟ ಮುಗಿಸಿ ಕೈ ತೊಳೆದು ಬರುವಾಗ ಯಾರೋ ಆತ್ಮೀಯರು ಸಿಕ್ಕಿದರು ಎಂದು ಒಂದು ಗಳಿಗೆ ಅವರ ಜೊತೆ ನಿಂತು ಮಾತಾಡಿದ್ದಷ್ಟೇ. ಮತ್ತೆ ನೋಡಿದರೆ ಮಾವ ನಾಪತ್ತೆ. ಎಲ್ಲಿ? ಎಲ್ಲಿ ತಪ್ಪಿಸಿಕೊಂಡರು? ಎನ್ನುವ ಹುಡುಕಾಟ. ನೋಡಿದರೆ ಎರಡನೇ ಪಂಕ್ತಿಯ ಊಟಕ್ಕೆ ಎಲೆ ಹಿಡಿದು ಕೂತಿದ್ದಾರೆ ಗಿರಾಕಿ. ಕೋಸಂಬರಿಗೆ ಕೈ ಹಚ್ಚಿಯಾಗಿದೆ. ‘ಏಳಿ, ನಿಮ್ಮ ಊಟ ಆಗಿದೆ’ ಅಂದರೆ ಅಲ್ಲೊಂದು ಪ್ರಹಸನ ನಡೆಯುತ್ತದೆ ಅನ್ನುವ ಕುರಿತು ಅನುಮಾನ ಇಲ್ಲ.

‘ಸುಳ್ಳು ಹೇಳ್ತೀಯೇನೆ? ನಾನೆಲ್ಲಿ ಊಟ ಮಾಡಿದೀನಿ? ಮನೇಲಂತೂ ಹೊಟ್ಟೆತುಂಬ ಊಟ ಹಾಕಲ್ಲ. ಹೋದಲ್ಲಿ, ಬಂದಲ್ಲಿ ಕೂಡ ಕಂಟ್ರೋಲ್ ಮಾಡ್ಬೇಡ…’ ಎಂದು ಶುರುವಾಗಿಬಿಡಬಹುದು. ಕೆಲವೊಂದು ಪ್ರಶ್ನೆಗಳು, ಕೆಲವೊಂದು ಪುಕಾರುಗಳು ಅವವೇ ಎಷ್ಟು ಪುನರಾವರ್ತನೆಯಾಗುತ್ತವೆ ಅಂದರೆ ಬೇರೆ ವಾಕ್ಯಗಳೇ ಗೊತ್ತಿಲ್ಲ ಅನ್ನುವಂತೆ.

ಅವರ ಎರಡನೆಯ ಊಟ ಮುಗಿಯುವವರೆಗೆ ದೂರದಲ್ಲಿ ಕಾದು ನಿಂತು ಅವರನ್ನು ಹೊರಡಿಸಿಕೊಂಡು ಬರುವ ಯೋಚನೆಯಲ್ಲಿದ್ದಳು ಶೀಲಾ. ಅವರು ಮತ್ತೆ ಊಟಕ್ಕೆ ಕೂತಿದ್ದನ್ನು ಯಾರೂ ಗಮನಿಸದಿದ್ದರೆ ಸಾಕು ಎನ್ನುತ್ತಿತ್ತು ಮರ್ಯಾದೆ. ಆದರೆ ಹಾಗಾಗಲಿಲ್ಲ. ಮೊದಲ ಪಂಕ್ತಿಯ ಊಟಕ್ಕೆ ಬಂದು ಎಲ್ಲಾ ಕಡೆ ಪರಾಂಬರಿಸಿ ಊಟಕ್ಕೆ ಎಲೆ ಸಿಗದೆ ಹೋದವರೊಬ್ಬರು ಎರಡನೇ ಪಂಕ್ತಿಗೆ ಊಟಕ್ಕೆ ಕೂತಿದ್ದರು. ಚಿದಾನಂದನನ್ನು ಎದುರು ಸಾಲಿನಲ್ಲಿ ನೋಡಿ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದರು. ಕೈ ತೊಳೆಯಲು ಬಂದಾಗ ಅಲ್ಲೇ ಕಾದು ನಿಂತಿದ್ದ ಶೀಲಾಳನ್ನು ನೋಡಿ, ‘ನಿನ್ನ ಮಾವ ಎರಡೆರಡು ಸಲ ಊಟ ಮಾಡಿದ್ರಲ್ಲೇ. ಪಾಪ, ಏನೂ ಗೊತ್ತಾಗಲ್ಲ. ವಯಸ್ಸಾದೋರನ್ನ ನೀನು ಕಣ್ಣಲ್ಲಿ ಕಣ್ಣಿಟ್ಟು ನೋಡ್ಕೋಬೇಕಮ್ಮಾ…’ ಎಂದು ಹಿತೋಪದೇಶ ಮಾಡಿದ್ದರು. ಅವಮಾನದಿಂದ ಕಣ್ಣುಗಳು ತುಂಬಿ ಬಂದು ಶೀಲಾ ಮಾವನ ಕೈಹಿಡಿದು ಆಚೆಗೆ ಕರೆದುಕೊಂಡು ಬಂದಿದ್ದಳು. ನೋಡದಿದ್ದರೆ ಮತ್ತೆ ಮೂರನೆಯ ಸಲ ಹೋಗಿ ಊಟಕ್ಕೆ ಕೂರುತ್ತಿದ್ದರೇನೋ ಎನ್ನುವ ನೆನವರಿಕೆಯಿಂದ ಮೈ ಜುಂ ಅಂದಿತ್ತು. ಈ ಅಸಮಾಧಾನವನ್ನೆಲ್ಲಾ ಅವಳು ಕಕ್ಕಿಕೊಂಡಿದ್ದು ಭಾರ್ಗವನ ಮೇಲೆ.

‘ನಿಮ್ಮನ್ನ ಮದುವೆಯಾಗಿ ಸುಖ ಸುಕ್ಕೊರ್ತಿದೀನಿ. ಎಂತೆಂತೋರೆಲ್ಲಾ ಹಾಯಾಗಿರ್ತಾರೆ. ನಂಗ್ಯಾಕೆ ಬಂತು ಈ ಕಷ್ಟ? ಈ ಪರೀಕ್ಷೆ ನಂಗೇ ಯಾಕೆ ಬಂತು ಅಂತ?’

‘ಎಲ್ರಿಗೂ ಅವರವರ ಕಷ್ಟ ಇದ್ದೇ ಇರುತ್ತೆ ಕಣೇ. ನೀನೇನು ಮನೆ ಮನೆ ಸರ್ವೆ ಮಾಡ್ಕೊಂಡು ಬಂದಿದೀಯಾ?’

‘ನೋಡಿದ್ರೆ ಗೊತ್ತಾಗಲ್ವಾ? ನನ್ನ ಹಾಗೆ ಯಾರೂ ಮುದುಕರನ್ನ ಕಾದ್ಕೊಂಡು ಮನೇಲಿ ಬಿದ್ದಿರಲ್ಲ. ಹೋಟೆಲು, ಸಿನಿಮಾ, ಟೂರು ಗೀರು ಅಂತ ಗಮ್ಮತ್ತಾಗಿರ್ತಾರೆ. ನನ್ನ ಹಣೇಬರ’

‘…..’

‘ಇವತ್ತು ಯಾರೋ ಹೇಳಿದ್ರು ಕಣ್ರೀ’.

‘ಏನಂತ?’

‘ಇಂತೋರಿಗೆ ಆಯುಷ್ಯ ಜಾಸ್ತಿ ಅಂತೆ. ಯಾವ ಚಿಂತೇನೂ ತಲೆಗೆ ಹಚ್ಕೊಳ್ಳಲ್ಲ, ಯಾವ ಕಷ್ಟಾನೂ ಅರ್ಥ ಆಗಲ್ಲ ಅಂದ್ರೆ ಆರೋಗ್ಯ ಚೆನ್ನಾಗಿರುತ್ತಂತೆ’.

‘ಅಪ್ಪಂಗೆ ಏನು ಕಾಯಿಲೆ ಇದೆ ಅಂತ ಹೊಸ್ತಾಗಿ ಹೇಳ್ಬೇಕೇನೇ?’

‘ಅವರೇ ಒಂದಕ್ಕೆರಡು ಮಾಡ್ಕೋತಾರೆ. ಇಂತೋರಿಗೆ ಮಾತ್ರೆ ಬೇರೆ ದಂಡ’.

‘ನಿಂಗೆ ಸಾವಿರ ಸಲ ಹೇಳಿದೀನಿ. ಅಪ್ಪಂಗೆ ಏನೂ ಗೊತ್ತಾಗಲ್ಲ. ಯಾರಾದ್ರೂ ಬೇಕ್‌ಬೇಕೂಂತ ಹೀಗೆ ನಡ್ಕೋತಾರಾ?’

‘ಬೇಕ್ ಬೇಕೂಂತ್ಲೋ, ಬೇಡ ಅಂತ್ಲೋ, ಅನುಭವಿಸೋದಂತೂ ತಪ್ಪಿದ್ದಲ್ವಲ್ಲ? ನೋಡ್ತಿರಿ ಏನಾಗುತ್ತೆ ಅಂತ’.

ಶೀಲಾ ಹೇಳಿದ ಭವಿಷ್ಯ ನಿಜವಾಯ್ತು. ರಾತ್ರಿಯಿಡೀ ಚಿದಾನಂದನಿಗೆ ವಾಂತಿ ಬೇಧಿ. ಮರುದಿನ ರಜಾ ಹಾಕಿ ಭಾರ್ಗವ ಅಪ್ಪನನ್ನು ನೋಡಿಕೊಂಡ.

* * *

ಚಿದಾನಂದ ಎರಡೆರಡು ಸಲ ಊಟ ಮಾಡಿದ ಪ್ರಸಂಗವನ್ನು ಹೆಚ್ಚು ಜನ ಗಮನಿಸಿರಲಿಕ್ಕಿಲ್ಲ ಎನ್ನುವ ಸಮಾಧಾನದ ಮೊರೆ ಹೊಕ್ಕು ತನ್ನ ದುಗುಡವನ್ನು ಕಡಿಮೆ ಮಾಡಿಕೊಂಡಿದ್ದಳು ಶೀಲಾ. ಆದರೆ ಹೆಚ್ಚು ಜನ ಯಾಕೆ, ಎಲ್ಲರೂ ನೋಡುವಂಥ, ಲೊಚಗುಟ್ಟುವಂಥ ಒಂದು ಪ್ರಸಂಗ ಇನ್ನೊಂದು ಇಂಥದೇ ಜನ ಒಗ್ಗೂಡುವ ಸಮಾರಂಭದಲ್ಲಿ ನಡೆದು ಹೋಯ್ತು. ಹೊರಗೆಲ್ಲಾದರೂ ಹೋದಾಗ ಮನೆಗೆ ಬರುವವರೆಗೆ ಮೂತ್ರ ವಿಸರ್ಜನೆಯ ಒತ್ತಡವನ್ನು ತಡೆದುಕೊಳ್ಳುವುದು ಚಿದಾನಂದನಿಗೆ ಅಸಾಧ್ಯ. ಒಂದೆರಡು ಸಲವಾದರೂ ಟಾಯ್ಲೆಟ್ ಹುಡುಕಿಕೊಂಡು ಹೋಗಬೇಕು. ಶೀಲಾ ಎಲ್ಲಿಗಾದರೂ ಹೋದಾಗ ಮೊದಲು ಗುರ್ತಿಸಿಕೊಳ್ಳುವುದೇ ಶೌಚಾಲಯ. ಮಾವನನ್ನು ಒಳಗೆ ಕಳಿಸಿ, ಹೊರಗೆ ಕಾದು